ಎಂದು ಕಂಪನಿಯ ವಕ್ತಾರರು ಹೆಮ್ಮೆಯಿಂದ ಘೋಷಿಸಿದರು. ಹತ್ತೇ ವರ್ಷಗಳಲ್ಲಿ ಫ್ಯಾಕ್ಟರಿಯ ಕಾರ್ಮಿಕರಲ್ಲಿ ಮೂತ್ರಪಿಂಡ ಸಮಸ್ಯೆ ತಲೆದೋರತೊಡಗಿತು. ದೂರದ ಕೊಳ್ಳದಲ್ಲಿ ಪಾದರಸದ ಸಂಯುಕ್ತಗಳನ್ನು ಬಿಸಾಕಿದ್ದನ್ನು ಗ್ರೀನ್‌ಪೀಸ್ ಸಂಸ್ಥೆಯ ಕಾರ್ಯಕರ್ತರು ಪತ್ತೆ ಹಚ್ಚಿದರು. ಸುತ್ತಮುತ್ತಲಿನ ಗಾಳಿಯಲ್ಲಿ, ನೀರಿನಲ್ಲಿ ಅಪಾಯಕಾರಿ ಪಾದರಸ ಸಂಯುಕ್ತದ ಪ್ರಮಾಣ ಸಾವಿರ ಪಟ್ಟು ಹೆಚ್ಚಿರುವುದು ತನಿಖೆಯಿಂದ ತಿಳಿದು ಬಂತು. ಪರಿಸರ ಕಾರ್ಯಕರ್ತರ ಒತ್ತಾಯದ ಮೇರೆಗೆ 290 ಟನ್ ಪಾದರಸದ ತ್ಯಾಜ್ಯವನ್ನು ಅಮೆರಿಕದ ಮಾತೃ ಕಂಪನಿಗೇ ಮರುರವಾನೆ ಮಾಡಲಾಯಿತು. ಕಾರ್ಖಾನೆಯನ್ನು 2001ರಲ್ಲಿ ಮುಚ್ಚಿಸಲಾಯಿತು. ನೆನಪಿಡಬೇಕಾದ ಸಂಗತಿ ಏನೆಂದರೆ ಇದೆಲ್ಲದರ ಶ್ರೇಯ ಪರಿಸರ ಹೋರಾಟಗಾರರದ್ದೇ ವಿನಾ ಅದುವರೆಗೆ ಕೈಕಟ್ಟಿ ಕೂತಿದ್ದ ಮಾಲಿನ್ಯ ನಿಯಂತ್ರಣ ಮಂಡಲಿಯದ್ದಲ್ಲ.

ಜಾಗತೀಕರಣದ ನಂತರವಂತೂ ವಿದೇಶೀ ಹೂಡಿಕೆದಾರರು ಭಾರೀ ಸಂಖ್ಯೆಯಲ್ಲಿ ಭಾರತಕ್ಕೆ ಬಂದರು. ಇಲ್ಲಿ ಕೂಲಿವೆಚ್ಚ ಬಹಳ ಕಡಿಮೆ. ಅದರಲ್ಲೂ ವಿಶೇಷ 'ಆರ್ಥಿಕ ವಲಯ'ಗಳಲ್ಲಿ ಉದ್ಯಮವನ್ನು ಆರಂಭಿಸಿದರೆ ತೆರಿಗೆ ಕಟ್ಟುವ ಅಗತ್ಯವೂ ಇಲ್ಲ. ವಿದ್ಯುತ್ ಶಕ್ತಿ, ನೀರು, ನೆಲವೆಲ್ಲ ಕಡಿಮೆ ದರದಲ್ಲಿ ಸಿಗುತ್ತದೆ. ಮೇಲಾಗಿ ಗಾಳಿಗೆ, ಮಣ್ಣಿಗೆ, ನೀರಿಗೆ ಅದೆಷ್ಟೇ ಮಾಲಿನ್ಯ ಹಬ್ಬಿಸಿದರೂ ದಂಡ ಹಾಗೂ ಶಿಕ್ಷೆಯಿಂದ ಪಾರಾಗಬಹುದು. ಇವೆಲ್ಲ ಗೊತ್ತಿದ್ದರಿಂದ ಸಾಲುಸಾಲಾಗಿ ಉದ್ಯಮಗಳು ಬಂದವು.

## ಸ್ಟರ್ಲೈಟ್‌ನಿಂದ ಸ್ಟೈರೀನ್‌ವರೆಗೆ

ಎರಡು ವರ್ಷಗಳ ಹಿಂದೆ ತಮಿಳುನಾಡಿನ ತೂತ್ತುಕುಡಿಯಲ್ಲಿ ತಾಮ್ರದ ಸಂಸ್ಕರಣೆ ಮಾಡುತ್ತಿದ್ದ ಸ್ಟರ್ಲೈಟ್ ಫ್ಯಾಕ್ಟರಿ ಇದೇ ದಿನಗಳಲ್ಲಿ (ಮೇ 2223) ಸುದ್ದಿ ಮಾಡಿತ್ತು. ಅಲ್ಲಿ ಸುತ್ತೆಲ್ಲ ಮಾಲಿನ್ಯ ಹಬ್ಬಿ, ಅನೇಕ ದುರ್ಘಟನೆಗಳು ಸಂಭವಿಸಿದ್ದರೂ ಅಧಿಕಾರಿಗಳು ಕ್ರಮ ಕೈಗೊಳ್ಳುವ ಬದಲು ಕಾರ್ಖಾನೆಯ ವಿಸ್ತರಣೆಗೆ 'ವೇದಾಂತ ಲಿಮಿಟೆಡ್' ಕಂಪನಿಗೆ ಅನುಮತಿ ನೀಡಿದ್ದರು. ಸುತ್ತಲಿನ ನಿವಾಸಿಗಳು ಪ್ರತಿಭಟನೆ ನಡೆಸಿದಾಗ ಪೋಲೀಸರು ಗುಂಡಿನ ದಾಳಿ ನಡೆಸಿ 13 ಜನರನ್ನು ಕೊಂದು 102 ಜನರಿಗೆ ಗಾಯ ಮಾಡಿದ್ದರು. ಅಲ್ಲೂ ಅಷ್ಟೆ, ಗಾಳಿಗೆ, ನೀರಿಗೆ ಅಪಾಯಕಾರಿ ತ್ಯಾಜ್ಯವನ್ನು ಹರಿಬಿಡುತ್ತಿರುವುದನ್ನು ಪ್ರತಿಭಟನೆ ಮಾಡಿದಾಗಲೆಲ್ಲ ತನಿಖೆ ನಡೆದು, ಅಪಾಯ ದೊಡ್ಡ ಮಟ್ಟದ್ದೆಂಬ ವರದಿ ಅದೆಷ್ಟೊ ಬಾರಿ ಬಂದಿತ್ತು. ಫ್ಯಾಕ್ಟರಿಯನ್ನು ಮುಚ್ಚಲು ನ್ಯಾಯಾಲಯ ಆದೇಶವನ್ನೂ ನೀಡಿತ್ತು. ಆದರೂ ವಿಸ್ತರಣೆಗೆ ಅನುಮತಿ ನೀಡಲಾಗಿತ್ತು (ಲಂಡನ್ನಿನಲ್ಲಿ ವಾಸವಾಗಿರುವ ವೇದಾಂತ ಕಂಪನಿಯ ಮಾಲಿಕ ಅನಿಲ್ ಅಗರವಾಲ್ ಮೂಲತಃ ಗುಜರಿ ವ್ಯಾಪಾರಿಯಾಗಿದ್ದ. ಹೊರ ದೇಶಗಳಿಂದ ಗುಜರಿ ಲೋಹಗಳನ್ನು ತರಿಸಿ ಇಲ್ಲಿ ಸಂಸ್ಕರಿಸಿ ಮಾರುತ್ತಿದ್ದವ. ಈತನ ಕಂಪನಿಯೇ ಒಡಿಶಾದ ನಿಯಾಮಗಿರಿ ಪರ್ವತಗಳಲ್ಲಿ ಆದಿವಾಸಿಗಳ ಒಕ್ಕಲೆಬ್ಬಿಸಿ ಅಲ್ಯೂಮಿನಿಯಂ ಉತ್ಪಾದನೆಗೆ ಬೇಕಾದ ಬಾಕ್ಸೈಟ್ ಅದಿರಿನ ಗಣಿಗಾರಿಕೆಗೆ ತೊಡಗಿತ್ತು. ಅದನ್ನು ಪ್ರತಿಭಟಿಸಿ ಗೆದ್ದ ಆದಿವಾಸಿ ತಂಡದ ನಾಯಕ ಪ್ರಫುಲ್ಲ ಸಮಂತರಾಗೆ 2017ರಲ್ಲಿ ಅಂತರರಾಷ್ಟ್ರೀಯ 'ಗೋಲ್ಡ್‌ಮನ್ ಪರಿಸರ ಪ್ರಶಸ್ತಿ' ಲಭಿಸಿದೆ. ಈ ಹಿಂದೆ, 2015ರಲ್ಲಿ ಪ್ರಧಾನಿ ಮೋದಿಯವರು ಲಂಡನ್ನಿಗೆ ಹೋಗಿದ್ದಾಗ, ಅವರ ಸ್ವಾಗತ ಕೋರಿ ಈತನೇ ಬ್ರಿಟನ್ನಿನ ಪ್ರಮುಖ ಪತ್ರಿಕೆಗಳಲ್ಲಿ ಪೂರ್ಣ ಪುಟದ ಜಾಹೀರಾತು ಕೊಟ್ಟಿದ್ದ). ಅಂತೂ ಜನಸಾಮಾನ್ಯರ ಒತ್ತಡದ ಮೇರೆಗೆ ಫ್ಯಾಕ್ಟರಿಯನ್ನು ಈಗ ಮುಚ್ಚಲಾಗಿದೆ.



ಪೋಷಕರೊಬ್ಬರು ಅಸ್ವಸ್ಥಗೊಂಡಿರುವ ತಮ್ಮ ಮಗನನ್ನು ಹೊತ್ತು ಆಸ್ಪತ್ರೆಗೆ ಸಾಗಿದರು

ಅಭಿವೃದ್ಧಿಯ ರಥವನ್ನು ಇನ್ನೂ ಜೋರಾಗಿ ಓಡಿಸಲೆಂದು ಸರ್ಕಾರ ಎರಡು ತ್ವರಿತ ಕ್ರಮಗಳನ್ನು ಜಾರಿಗೆ ತಂದಿದೆ. ಒಂದು, ಪರಿಸರ ಸಂರಕ್ಷಣೆಗೆ ಹೋರಾಡುತ್ತಿದ್ದ ಸಂಘಟನೆಗಳ ರೆಕ್ಕೆಪುಕ್ಕಗಳನ್ನು ಕತ್ತರಿಸುತ್ತಿದೆ. ಗ್ರೀನ್‌ಪೀಸ್ ಸಂಸ್ಥೆಗೆ ಮುಟ್ಟುಗೋಲು ಹಾಕಿದೆ. ಎರಡನೆಯದಾಗಿ ಪರಿಸರ ಸಂರಕ್ಷಣಾ ಕಾನೂನುಗಳನ್ನು ದುರ್ಬಲಗೊಳಿಸುತ್ತಿದೆ. ಇದೀಗ, ಈ ಕೊರೊನಾ ದುಷ್ಕಾಲದಲ್ಲೇ ಅದು ತರಲು ಹವಣಿಸಿದ ತಿದ್ದುಪಡಿಯೊಂದಕ್ಕೆ ಪ್ರತಿರೋಧಗಳು ಎದುರಾಗಿವೆ. 1994ರ ಅಧಿಸೂಚನೆಯ ಪ್ರಕಾರ, ಒಂದು ಚಿಕ್ಕ ಕಾರ್ಖಾನೆಯ ಅಥವಾ ಗಣಿ, ಅಥವಾ ಜಲಶಕ್ತಿ ಯೋಜನೆಗೆ ಕೈಹಾಕುವುದಾದರೂ ಅದರ ಪರಿಸರ ಪರಿಣಾಮಗಳ ಸಮಗ್ರ ಅಧ್ಯಯನದ (ಇಐಎ) ವರದಿಯನ್ನು ಸಿದ್ಧಮಾಡಿ, ಆಸುಪಾಸಿನ ಜನರ ಅಹವಾಲು ಆಕ್ಷೇಪಣೆಗಳನ್ನು ಆಲಿಸಿ ನಂತರ ಲೈಸೆನ್ಸ್ ನೀಡಬೇಕಾಗುತ್ತಿತ್ತು. ಆ ನಿಯಮವನ್ನು ಹಂತಹಂತವಾಗಿ ಬದಲಾಯಿಸುತ್ತ, ಹನ್ನೊಂದು ಬಾರಿ ಸಡಿಲಗೊಳಿಸಲಾಗಿದೆ. ಕೈಗಾ ಅಣುಸ್ಥಾವರದ 56ನೇ ಘಟಕದ ವಿಸ್ತರಣೆ ಬೇಡವೆಂದು ಒತ್ತಾಯಿಸಿದ್ದಕ್ಕೆ ಸಾರ್ವಜನಿಕ ಅಹವಾಲನ್ನು ಕಳೆದ ವರ್ಷ ಕೈಗಾ ಬಳಿ ಏರ್ಪಡಿಸಲಾಗಿತ್ತು. ಒಟ್ಟು 9 ಜನರಲ್ಲಿ ಎಂಟು ತಜ್ಞರು ವಿಸ್ತರಣೆ ಬೇಡವೆಂದು ಸಾಕಷ್ಟು ಸಾಕ್ಷ್ಯಗಳ ಮೂಲಕ ವಾದಿಸಿದರು. ಒಬ್ಬಾತ ಮಾತ್ರ ಉದ್ಯೋಗಕ್ಕಾಗಿ ವಿಸ್ತರಣೆ ಬೇಕೆಂದು ವಾದಿಸಿದ. ಕೊನೆಗೂ ಅವನೊಬ್ಬನ ಅಭಿಪ್ರಾಯಕ್ಕೇ ಬೆಲೆ ಬಂದಿದೆ.

ನಿಯಮಗಳನ್ನು ಸಡಿಲಿಸಿದ್ದೇ ಕಾರಣವಾಗಿ ಕಳೆದ ವರ್ಷ ಮುಂಬೈಯ ಆರೇ ಕಾಡನ್ನು ಧ್ವಂಸ ಮಾಡಿ ಅಲ್ಲಿ ಮೆಟ್ರೊ ರಿಪೇರಿ ಘಟಕಕ್ಕೆ ಅನುಮತಿ ಸಿಕ್ಕಿದೆ.



ವಿಷಾನಿಲದಿಂದ ಉಸಿರುಗಟ್ಟಿ ಕಟ್ಟಿದ ಜಾಗದಿಂದ ಒಡಲೂ ಆಗದೆ ಕೊನೆಯುಸಿರೆಳೆದಿರುವ ಜಾನುವಾರುಗಳು